

ಎದೆಮೇಲಿಟ್ಟು ತೋರುವ ಅಣ್ಣನ ಅಕ್ಕರೆಯಲ್ಲಿ, ಅಣ್ಣನ ತಲೆಯನ್ನು ತನ್ನ ತೊಡೆ ಮೇಲಿಟ್ಟು ಸೆರಗಿನಿಂದ ಗಾಳಿ ಬೀಸುವ ತಂಗಿಯ ವಾತ್ಸಲ್ಯದಲ್ಲಿ, ಎದೆ ಮೇಲಿಟ್ಟ ತಾವರೆ ಹೂ ತಂಗಿ ಹೊನ್ನಿಯಾಗಿ ನಿಂತ ಅದ್ಭುತ ಕಂಡ ಸಂಭ್ರಮದಲ್ಲಿ, ತಂಗಿಯನ್ನು ಬಾಚಿ ಎದೆಗವಚಿ ತಬ್ಬಿಕೊಳ್ಳುವ ಆಪ್ತತೆಯಲ್ಲಿ, ತಂಗಿ ಬಿಚ್ಚಿಟ್ಟ ಸಾವಿನ ಸತ್ಯಕ್ಕೆ ಅನ್ಯಾಯಕ್ಕೆ ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಅಣ್ಣನ ನಡೆಯಲ್ಲಿ ಮಾತೃರೂಪಿ ಕುಟುಂಬದ ಅಣ್ಣ-ತಂಗಿಯ ಬಂಧುತ್ವದ ಭಾವನಾತ್ಮಕ ಜಗತ್ತನ್ನು ತೆರೆದಿಡುತ್ತದೆ. ತಂಗಿಯ ಸಾವಿಗೆ-ಕೇಡಿಗೆ ಕಾರಣರಾದವರನ್ನು ಸಂಬಂಧದ ಗಡಿಯಾಚೆ ಕೊಚ್ಚಿ ಕಡಿವ, ಕಡಿದು ಚೆಲ್ಲುವ, ಬೆಂಕಿಯಿಟ್ಟು ಸುಡುವ ಸಂದರ್ಭವನ್ನು ದ್ವೇಷ, ಸೇಡು, ಕೊಲೆ, ಕ್ರೌರ್ಯವಾಗಿ ನಿರ್ವಚಿಸುವ ಸಾಧ್ಯತೆಯಿದೆ. ಪಠ್ಯಕೇಂದ್ರಿತವಾಗಿ ಸಂದರ್ಭವನ್ನು ಅರ್ಥೈಸುವ ಮಿತಿಯಿದು.

ಮೌಖಿಕ ಸಾಹಿತ್ಯ ಪಠ್ಯದ ಓದು ಲಿಖಿತ ಸಾಹಿತ್ಯದ ಪಠ್ಯದ ಅಧ್ಯಯನ ಕ್ರಮಕ್ಕಿಂತ ಬೇರೆಯಾದುದು. ಮೌಖಿಕ ಸಂಗತಿಯೊಂದನ್ನು ವಿಶ್ಲೇಷಿಸುವಲ್ಲಿ 'ಬೃಹತ್‌ಪಠ್ಯ'ದ ಜಾಗರದಲ್ಲೇ ಅರ್ಥದ ಹುಡುಕಾಟ ಮತ್ತು ವ್ಯಾಖ್ಯಾನ ಮಾಡಬೇಕಾಗುತ್ತದೆ. ಪಠ್ಯಕೇಂದ್ರಿತವಾಗಿ ನಿಂತು ಮಾತನಾಡುವುದು ಎಂದರೆ 'ಸತ್ಯ'ವನ್ನು ಕಳಕೊಂಡಂತೆಯೇ. ಯಾಕೆಂದರೆ ಅಲ್ಲಿನ ರೂಪಕಗಳನ್ನು, ಸಂಕೇತಗಳನ್ನು, ಭ್ರಾಮಕ ಸಂಗತಿಗಳನ್ನು ಜಾನಪದದ ಸಮಗ್ರತೆಯೊಂದಿಗೆ ಅರ್ಥೈಸಬೇಕಾಗುತ್ತದೆ. ಅದಕ್ಕೆ ಭಿನ್ನ ಪಠ್ಯಗಳ ಮಾಹಿತಿ ಸಾಮಗ್ರಿಗಳನ್ನು ಮುಖಾಮುಖಿಯಾಗಿಟ್ಟು ಅವುಗಳ ಪರಸ್ಪರ ಅಂತಃಸಂಬಂಧವನ್ನು ಮತ್ತು ತಾರ್ಕಿಕ ವೈರುಧ್ಯಗಳನ್ನು ಗುರುತಿಸುವ ಕೆಲಸವಾಗಬೇಕಾಗುತ್ತದೆ. ಇದಕ್ಕೆ ಹೊರವಿಸ್ತಾರದಲ್ಲಿ ಅದು ಆಡುವ ಮಾತಿಗಿಂತ ಭಿನ್ನವಾಗಿ ಅದರ ಒಳಮಿಡಿತದ ದನಿಯನ್ನು ಆಲಿಸಬೇಕಾಗುತ್ತದೆ. ಜನಪದ ಸಂಗತಿ ಅಥವಾ ಪಠ್ಯವೊಂದು ಕಾಲ, ಸಂದರ್ಭ, ಪ್ರೇಕ್ಷಕರಿಂದ ಪ್ರೇರಿತವಾಗುವಂತೆ ಬಂಧುತ್ವ ವ್ಯವಸ್ಥೆ ಪಠ್ಯವನ್ನು ಹೇಗೆ ರೂಪಿಸುತ್ತದೆ ಮತ್ತು ನಿಯಂತ್ರಿಸುತ್ತದೆ ಎಂಬ ಸೈದ್ಧಾಂತಿಕತೆಯನ್ನು `ಕೆರೆಗೆ ಹಾರ'ದ ಬಹುಪಠ್ಯದ ಮುಂದಿಟ್ಟು ಕಟ್ಟುವ ಪ್ರಯತ್ನವನ್ನು ಮೊದಲ ಬಾರಿಗೆ ಇಲ್ಲಿ ಮಾಡಲಾಗಿದೆ.

ಕರಾವಳಿ ಪಠ್ಯಗಳಿಗೂ ಕರ್ನಾಟಕದ ಇತರೆಡೆಯ ಪಠ್ಯಗಳಿಗೂ ಇರುವ ಬಹಳ ದೊಡ್ಡ ಭಿನ್ನತೆಯೆಂದರೆ ಹೆಣ್ಣಿನ ಬದುಕಿಗಿರುವ ಅರ್ಥ ಮತ್ತು ಮೌಲ್ಯಕ್ಕೆ ಸಂಬಂಧಿಸಿದ್ದು. ಕರಾವಳಿಯ ಪಠ್ಯಗಳಲ್ಲಿ ಸೊಸೆ ಹೆಣ್ಣನ್ನು ಹಾರಕೊಡುವುದು ಮತ್ತು ಆ ಹೆಣ್ಣು ಸಾಯದಿರುವುದು ಏಕೆ ಎನ್ನುವ ಪ್ರಶ್ನೆಯನ್ನು ಮುಂದಿಟ್ಟು ಉತ್ತರವನ್ನು ಬಿಡಿಸಿಕೊಳ್ಳಬೇಕು. ಕರಾವಳಿಯಲ್ಲಿ ಮಾತೃರೂಪಿ ಸಂಸ್ಕೃತಿಯ ನೆಲೆ, ಆ ಸಂಸ್ಕೃತಿಯ ದಟ್ಟ ಚಹರೆ ಇಲ್ಲಿನ ಪಠ್ಯಗಳ ಮೇಲಿದೆ. ಮಾತೃರೂಪಿ ಸಂಸ್ಕೃತಿಯಲ್ಲಿ ಹೆಣ್ಣು ಸಂತಾನ ಅಥವಾ ಕುಲ, ವಂಶ, ಪರಂಪರೆ, ಆಸ್ತಿ, ಹಕ್ಕು, ಅಧಿಕಾರ ಎಲ್ಲವೂ ಮಗಳದಾಗಿರುತ್ತದೆ. ಇಂತಹ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಣ್ಣು ಒಂದು ಅಗತ್ಯವಾಗುತ್ತಾಳೆ. ಹೆಣ್ಣಿನ ಬದುಕು ಮುಖ್ಯವಾಗುತ್ತದೆ. ಆಕೆಯ ಸಾವನ್ನು ಅದು ಬಯಸುವುದಿಲ್ಲ. ಕರ್ನಾಟಕದ ಇತರೆಡೆ ಪಿತೃರೂಪಿ ಕುಟುಂಬರಚನೆಯಿದ್ದು ಇದಕ್ಕೆ ವಿರುದ್ಧವಾಗಿ ಹೆಣ್ಣಿನ ಸ್ಥಿತಿಯಿರುತ್ತದೆ. ಈ ಎರಡೂ ಮಾದರಿಯ ಪಠ್ಯಗಳು ಪಿತೃರೂಪಿ ಮತ್ತು ಮಾತೃರೂಪಿ ಸಂಸ್ಕೃತಿಯ ರೂಪಕವಾಗಿ ದುಡಿಯುತ್ತಲೇ ಅದನ್ನೊಂದು ಸೈದ್ಧಾಂತಿಕ ಸಾಧ್ಯತೆಯಾಗಿ ಮಂಡಿಸುತ್ತದೆ. ಅಂದರೆ ಬಂಧುತ್ವ ವ್ಯವಸ್ಥೆ ಈ ಪಠ್ಯವನ್ನು ರೂಪಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ●